ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

O.S. ನಂಬರಃ 45/2017

ಡಿ. ಡಬ್ಲ್ಯೂಃ 2

ದಿಃ 05-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಗಣಪತಿ ಜೋಷಿ |
| ತಂದೆಯ ಹೆಸರುಃ | ಕಾಶಿನಾಥ |
| ವಯಸ್ಸುಃ | 74 ವರ್ಷ |
| ಉದ್ಯೋಗಃ | ರೈತಾಬಿ ಮತ್ತು ಮೀನುಗಾರಿಕೆ |
| ವಿಳಾಸಃ | ಗಾಬಿತಕೇಣಿ, ಅಂಕೋಲಾ. |

ಮುಖ್ಯ ವಿಚಾರಣೆಃ 1ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಯು.ಎ ಇವರಿಂದಃ

ಸಾಕ್ಷಿಯು ನಿಡಿ-2 ಮೋಕ್ತಿಯಾರನಾಮೆಯ ಮೇಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು, ಅದನ್ನು ನಿಡಿ-2ಸಿ ಎಂದು ಗುರುತಿಸಲಾಯಿತು. ವಕೀಲರಾದ ಎಸ್ ಹೆಚ್ ನಾಯಕ ಇವರ ಮನೆಯ ಹತ್ತಿರ ಹೋಗಿದ್ದು, ಅಲ್ಲಿ ಪ್ರತಿವಾದಿಯರು ಇದ್ದು, ಅವರು ಒಂದು ದಸ್ತಾವೇಜನ್ನು ಮಾಡಿದ್ದು, ಅದರಲ್ಲಿ 3 ಜನರು ಇದ್ದು, ನೀವು ಸಾಕ್ಷಿಯಾಗಿ ಸಹಿಯನ್ನು ಹಾಕಬೇಕು ಎಂದು ಹೇಳಿದ್ದು, ಅದರಂತೆ ನಾನು ಸಹಿಯನ್ನು ಹಾಕಿರುತ್ತೇನೆ. ಪ್ರತಿವಾದಿಯರು ಆ ಸಮಯದಲ್ಲಿ ರೂ.5 ಲಕ್ಷ ಹಣವನ್ನು ವಕೀಲರಾದ ಎಸ್ ಹೆಚ್ ನಾಯಕ ಇವರಿಗೆ ಕೊಟ್ಟಿದ್ದರು. ಸದರಿ ಹಣವನ್ನು ಅವರು ಜಮೀನು ಕೊಟ್ಟವರಿಗೆ ಬಟಾವಣೆ ಮಾಡಿರುತ್ತಾರೆ. ನನಗೆ ವಯಸ್ಸಾಗಿದ್ದರಿಂದ ದಸ್ತಾವೇಜಿನಲ್ಲಿರುವ ಫೋಟೋದಲ್ಲಿರುವ ವ್ಯಕ್ತಿಗಳ ಬಗ್ಗೆ ಪರಿಚಯವಿರುವುದಿಲ್ಲ. ನಿಡಿ-2 ನ್ನು ವಕೀಲರಾದ ಎಸ್ ಹೆಚ್ ನಾಯಕ ಇವರ ಮನೆಯಲ್ಲಿಯೇ ಬರೆದಿದ್ದು, ಅಲ್ಲಿಯೇ ಸಹಿಯನ್ನು

ಹಾಕಿರುತ್ತೇನೆ. ವಕೀಲರಾದ ಎಸ್ ಹೆಚ್ ನಾಯಕ ಇವರೇ ದಸ್ತಾವೇಜಿನ ಮೇಲೆ ಪೋಟೋಗಳನ್ನು ಅಂಟಿಸಿರುತ್ತಾರೆ. ಪೊಟೋಗಳು ವಕೀಲರ ಹತ್ತಿರವೇ ಇದ್ದವು. ಪೊಟೋದಲ್ಲಿ ಇದ್ದ ವ್ಯಕ್ತಿಗಳು ಸಹಿ ಹಾಕಿದ ನಂತರ ನಾನು ಸಹಿಯನ್ನು ಹಾಕಿರುತ್ತೇನೆ. ದಸ್ತಾವೇಜಿನಲ್ಲಿ ಬರೆದ ವಿಷಯವನ್ನು ವಕೀಲರು ಓದಿ ಹೇಳಿರುತ್ತಾರೆ. ಇದೆಲ್ಲ ಪ್ರಕ್ರಿಯೇ 1 ತಾಸಿನವರೆಗೆ ನಡೆದಿದ್ದು, ನಂತರ ನಾನು ಕೆಲಸ ಇದ್ದಿದ್ದರಿಂದ ಹೊರಟುಹೋಗಿರುತ್ತೇನೆ.

<u>ಪಾಟಿ ಸವಾಲುಃ</u> ವಾದಿಯ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

2. ನ್ಯಾಯಾಲಯಕ್ಕೆ ನೀವು ಸುಮಾರು ಎಷ್ಟು ವರ್ಷಗಳಿಂದ ಬಂದು ಹೋಗಿ ಮಾಡುತ್ತೀರಿ ಎಂದರೆ ಸಾಕ್ಷಿಯು ಅಂದಾಜು 40 ವರ್ಷಗಳಿಂದ ಎಂದು ನುಡಿಯುತ್ತಾರೆ. ನೀವು ಎಸ್ ಹೆಚ್ ನಾಯಕ ವಕೀಲರನ್ನು ಎಷ್ಟು ವರ್ಷಗಳಿಂದ ಪರಿಚಯಿಸುತ್ತೀರಿ ಎಂದರೆ ಸಾಕ್ಷಿಯು 18-20 ವರ್ಷಗಳಿಂದ ಪರಿಚಯಿಸುತ್ತೇನೆ ಎಂದು ನುಡಿಯುತ್ತಾರೆ. ಅವರ ಮನೆಯು ಅಂಕೋಲಾದಿಂದ ಎಷ್ಟು ಕಿ.ಮೀ ಆಗುತ್ತದೆ ಎಂದರೆ ಸಾಕ್ಷಿಯು 4 ಕಿ.ಮೀ ಆಗಬಹುದು, ಬೋಳೆ ಗ್ರಾಮದಲ್ಲಿ ಅವರ ಮನೆ ಇರುತ್ತದೆ. ನೀವು ವಕೀಲರಾದ ಎಸ್ ಹೆಚ್ ನಾಯಕ ಇವರ ಮನೆಗೆ ಹೋಗಿರುತ್ತೀರೋ ಅಥವಾ ಕಚೇರಿಗೆ ಹೋಗಿರುತ್ತಿರೋ ಎಂದರೆ ಸಾಕ್ಷಿಯು ಅವರ ಮನೆಯಲ್ಲಿಯೇ ಕಚೇರಿ ಇದ್ದು, ಕಚೇರಿಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಅವರ ಕಚೇರಿ ಕಿತ್ತೂರು ಚೆನ್ನಮ್ಮ ರಸ್ತೆಯಲ್ಲಿರುವ ಎಸ್ ಬಿ ಐ ಬ್ಯಾಂಕ್ ಹತ್ತಿರ ಇತ್ತು ಎಂದರೆ ಸಾಕ್ಷಿಯು ಈ ಹಿಂದೆ ಇದ್ದಿದ್ದು, ಈಗ ಅವರ ಮನೆಯಲ್ಲಿಯೇ ಕಚೇರಿಯನ್ನು ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಈಗ ಮನೆಯಲ್ಲಿಯೇ ಕಚೇರಿಯನ್ನು ಮಾಡಿಕೊಂಡು ಎಷ್ಟು ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು ಸುಮಾರು 5 ವರ್ಷಗಳು

ಆಗಿರಬಹುದು ಎಂದು ನುಡಿಯುತ್ತಾರೆ. ನಿಮ್ಮ ಅನುಭವದ ಪ್ರಕಾರ ದಸ್ತಾವೇಜನ್ನು ಬರೆಯಬೇಕಾದರೆ ಯಾವ ಗ್ರಾಮದಲ್ಲಿ ಯಾವ ದಿನಾಂಕದಂದು ಬರೆಯಲಾಗಿದೆ ಎಂದು ನಮೂದು ಮಾಡುತ್ತಾರೆ ಎಂದರೆ ಸರಿ. ಎಸ್ ಹೆಚ್ ನಾಯಕ ಇವರ ಮನೆಯು ಬೋಳೆ ಗ್ರಾಮದಲ್ಲಿ ಬರುತ್ತದೆ ಎಂದರೆ ಸರಿ. ನೀವು ಸಹಿ ಮಾಡಿದ ದಸ್ತಾವೇಜು ಬೋಳೆ ಗ್ರಾಮದಲ್ಲಿ ಬರೆಯಲಾಗಿದೆ ಎಂದು ನಮೂದು ಮಾಡಿರುತ್ತಾರಾ ಎಂದರೆ ಸಾಕ್ಷಿಯು ಅದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಅನುಭವದ ಪ್ರಕಾರ ದಸ್ತಾವೇಜು ಬರೆದವರೂ ಸಹ ಸಹಿ ಮಾಡುತ್ತಾರೆ ಎಂದರೆ ಸಾಕ್ಷಿಯು ನಾನು ದಸ್ತಾವೇಜಿನ ಮೇಲೆ ಕೇವಲ ಸಹಿ ಮಾತ್ರ ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

3. ಸಾಮಾನ್ಯವಾಗಿ ಹಣ ತೆಗೆದುಕೊಂಡ ನಂತರ ಇಂತಿಷ್ಟು ಹಣ ಎಂದು ಬರೆಯುತ್ತಾರೆ ಎಂದರೆ ಸಾಕ್ಷಿಯು ಹಣದ ವಿಚಾರವಾಗಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

4. 1ನೇ ಪ್ರತಿವಾದಿಯು ನಿಮಗೆ ಎಷ್ಟು ವರ್ಷಗಳಿಂದ ಗೊತ್ತು ಎಂದರೆ ಸಾಕ್ಷಿಯು ನಾವು ನ್ಯಾಯಾಲಯಕ್ಕೆ ಬರುತ್ತಾ ಇರುತ್ತೇವೆ ಹಾಗಾಗಿ ಪರಿಚಯವಿರುತ್ತದೆ ಎಂದು ನುಡಿಯುತ್ತಾರೆ. ನೀವು ಸಹಿ ಹಾಕಿದ್ದೀರಿ ಎಂದು ಹೇಳುವ ಸಹಿಯನ್ನು ಕಾಗದ ಪತ್ರದ ಮೇಲೆ 1ನೇ ಪ್ರತಿವಾದಿಯ ಒತ್ತಾಯದ ಮೇರೆಗೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಒತ್ತಾಯದ ಮೇರೆಗೆ ಸಹಿ ಮಾಡಿರುವುದಿಲ್ಲ, ವಕೀಲರು ಹಾಕಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯರು ಯಾರೂ ಸಹ ಪ್ರತಿವಾದಿಯರಿಂದ ಹಣವನ್ನು ಪಡೆದುಕೊಂಡಿದ್ದು ಇರುವುದಿಲ್ಲ ಹಾಗೂ ಒಟ್ಟು

ಮೋಕ್ತಿಯಾರನಾಮೆಯನ್ನು ಬರೆದುಕೊಟ್ಟಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಸಹಿ ಹಾಕಿದ ದಸ್ತಾವೇಜುಗಳು ಸೃಷ್ಟಿ ಮಾಡಿಕೊಂಡಂತಹ ದಾಖಲಾತಿಗಳು ಎಂದರೆ ಸರಿಯಲ್ಲ. 1 ಮತ್ತು 2ನೇ ಪ್ರತಿವಾದಿಯರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ವಕೀಲರ ಮನೆಯಲ್ಲಿ ಎಷ್ಟು ಹೊತ್ತಿನತನಕ ಇದ್ದೀರಿ ಎಂದರೆ ಸಾಕ್ಷಿಯು ಮನೆಯಲ್ಲಿ ಇರಲಿಲ್ಲ ಕಚೇರಿಯಲ್ಲಿ ಇದ್ದೆ ಎಂದು ನುಡಿಯುತ್ತಾರೆ. 2015ನೇ ಸಾಲಿನಲ್ಲಿ ಎಸ್ ಹೆಚ್ ನಾಯಕ ಇವರ ಕಚೇರಿ ಅಂಕೋಲಾದ ಕೆ ಸಿ ರಸ್ತೆ, ಎಸ್ ಬಿ ಐ ಬ್ಯಾಂಕ್ ಹತ್ತಿರ ಇತ್ತು ಎಂದರೆ ಸಾಕ್ಷಿಯು ಅದು ವಕೀಲರಿಗೆ ಸಂಬಂಧಪಟ್ಟ ವಿಷಯವಾಗಿದ್ದು, ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.